ಕವಿತೆ



**ಸಿಂಧುಚಂದ್ರ ಹೆಗಡೆ**

ಕಲೆ: ಎಸ್.ವಿ. ಹೂಗಾರ್

# ಮಳೆ ಮಧ್ಯಾಹ್ನ ಮತ್ತು ಅವನು



ಬರೆಯದಿರುವ ಸುಖದ ಬಗ್ಗೆ
ನಾವಿಬ್ಬರೂ ಮಾತನಾಡಿದೆವು...

ಬಹುಶಃ ಮಧ್ಯಾಹ್ನವಾಗಿತ್ತು ಆಗ
ಅಂತಿಂತದ್ದಲ್ಲ...
ಸಂಜೆಯಾಗಲು ಕಾತುರದಿಂದಿದ್ದ
ಮಧ್ಯಾಹ್ನ ಅದು...

ಮಳೆ ಸಾಥ್ ನೀಡಿತ್ತು
ಅವನ ಮಾತು ಮುಂದುವರಿದಿತ್ತು
ತಿದ್ದುವ ಚಿಂತೆಯಿಲ್ಲ
ಸರಿಪಡಿಸುವ ತಲೆಬಿಸಿಯಿಲ್ಲ
ಯಾರಿಗೆ ಕಳಿಸಬೇಕು? ಆತಂಕವೂ ಇಲ್ಲ...
ಪ್ರಕಟವಾದೀತೇ... ಹೆದರಿಕೆಯಿಲ್ಲ
ಖಾಲಿಹಾಳೆ
ಹಾಳಾಗುವುದಿಲ್ಲ, ಇಂಕು ಕಕ್ಕುವುದಿಲ್ಲ.
ನಾನೂ ದನಿಗೂಡಿಸಿದೆ
ಆಹಾ, ಬರೆಯದಿರುವ ಸುಖವೇ ಸುಖ
ಇಬ್ಬರೂ ನಕ್ಕೆವು

ಚೂರೂ ಬಿಸಿಲಿರದ ಮಧ್ಯಾಹ್ನ
ಮಳೆಯಿಂದ ತಣ್ಣಗಿತ್ತು
ಸಂಜೆಯಾದರೂ ಇಷ್ಟೇ ಹಣೆಬರಹ
ಸತ್ಯ ಗೊತ್ತಾಗಿತ್ತು...

ಒಂದಿನ ಸಿಟ್ಟು ಬಂದಾಗ ಬರೆಯಬೇಕು...
ಕಥೆ ಕಷ್ಟ, ಕೊನೆಪಕ್ಷ ಕವಿತೆಯನ್ನಾದರೂ...
ಮಾತನಾಡುತ್ತಿರುವಾಗಲೇ
ಸಟಕ್ಕನೆ ಎದ್ದುಹೋಗುವುದು
ಅವನ ದುರಭ್ಯಾಸಗಳಲ್ಲೊಂದು

ಈ ಮಧ್ಯಾಹ್ನ ಅವನು ಕಥೆ
ಹೇಳುತ್ತಿರುವಾಗಲೇ ನಾನು ನಿರ್ಗಮಿಸಿದೆ...